ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ
ಶ್ರೀರಂಗಪಟ್ಟಣ
ಸಿಸಿ 37/2017 ಸಿಡಬ್ಲ್ಯೂ : 5 ಪಿ ಡಬ್ಲ್ಯೂ : 5

| | |
|---|---|
| ಹೆಸರು | ನಿತಿನ್ |
| ತಂದೆಯ ಹೆಸರು | ನಾಗೇಂದ್ರ |
| ವಯಸ್ಸು | 25 ವರ್ಷ |
| ವೃತ್ತಿ | ಖಾಸಗಿ ಕೆಲಸ |
| ವಾಸ | ಬ್ರಹ್ಮಪುರ ಗ್ರಾಮ |

ದಿನಾಂಕಃ 05.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ

1. ಚಾಸಾ 1 ರಿಂದ 4, 6 ರಿಂದ 11 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ದಿಃ 29.03.2017 ರಂದು ನಾನು ಮನೆಯಲ್ಲಿದ್ದಾಗ ಸುಮಾರು ಸಂಜೆ 4.30 ಗಂಟೆಗೆ 1 ನೇ ಆರೋಪಿಯು ನನ್ನ ತಂದೆಯೊಂದಿಗೆ ಗಲಾಟೆ ಮಾಡಿರುತ್ತಾರೆ. ಚಾಸಾ 2 ಆದ ನನ್ನ ಅತ್ತೆ ನಮ್ಮ ಮನೆಗೆ ಬಂದು 1 ನೇ ಆರೋಪಿಯು ಮತ್ತು ನನ್ನ ತಂದೆ ಗಲಾಟೆ ಮಾಡುತ್ತಿರುವ ವಿಷಯವನ್ನು ನಮಗೆ ತಿಳಿಸಿದರು. ಆಗ ನಾನು ಬ್ರಹ್ಮಪುರದ ಅರಳಿಕಟ್ಟೆ ಹತ್ತಿರ ಹೋಗಿ ನೋಡಿದಾಗ ಗಲಾಟೆಯು ನಿಂತಿದ್ದು, ನಾನು ನನ್ನ ತಂದೆಯನ್ನು ಮನೆಗೆ ಕರೆದುಕೊಂಡು ಬಂದೆ. ಅದಾದ ನಂತರ ಮನೆಯ ಹತ್ತಿರ 1 ರಿಂದ 5 ನೇ ಆರೋಪಿತರು ಬಂದು 1 ನೇ ಆರೋಪಿಯು ರಿಪೀಸ್ ಪಟ್ಟಿಯಿಂದ ನನ್ನ ತಲೆಗೆ ಹೊಡೆದು ತಲೆಯನ್ನು ಓಪನ್ ಮಾಡಿರುತ್ತಾರೆ. ನಂತರ 2 ನೇ ಆರೋಪಿಯು ಅದೇ ರಿಪೀಸ್ ಪಟ್ಟಿಯಿಂದ ನನ್ನ ತಂದೆಯ ತಲೆಗೆ ಹೊಡೆದು ಅವರ ತಲೆ ಕೂಡ ಓಪನ್ ಆಗಿರುತ್ತದೆ. 1 ನೇ ಆರೋಪಿಯು ಚಾಸಾ 4 ಆದ ನನ್ನ ಅಜ್ಜಿಗೆ ಕೆಳಗೆ ನೂಕಿ ಅವರ ಎದೆಯ ಮೇಲೆ ಕಾಲು ಇಟ್ಟು, ತುಳಿದಿರುತ್ತಾರೆ. ನಂತರ ನನ್ನ ತಾಯಿ ಚಾಸಾ 6 ರವರಿಗೆ 1 ನೇ ಆರೋಪಿಯು

ರಿಪೀಸ್ ಪಟ್ಟಿಯಿಂದ ತೊಡೆಗೆ ಹೊಡೆದಿರುತ್ತಾರೆ. ಚಾಸಾ 3 ರವರನ್ನು 3 ಮತ್ತು 4 ನೇ ಆರೋಪಿಯು ಕೆಳಗೆ ಬೀಳಿಸಿ ಕುತ್ತಿಗೆಯನ್ನು ಅದುಮಿರುತ್ತಾರೆ. ಎಲ್ಲರಿಗೂ ಪೆಟ್ಟಾಗಿದ್ದು, ಸ್ಥಳೀಕರು ಬಂದು ಗಲಾಟೆಯನ್ನು ಬಿಡಿಸಿರುತ್ತಾರೆ. ನನ್ನನ್ನು ಮೊದಲು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಚಾಸಾ 1 ರಿಂದ 4 ಮತ್ತು 6 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಪೊಲೀಸ್ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ತಲೆಗೆ ಹೊಲಿಗೆ ಹಾಕಿದ್ದು, ನಂತರ ನನ್ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಪ್ರಜ್ವಲ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ ಎಂ ಒ 1 ರಿಂದ 3 ಅನ್ನು ನೋಡಿ ಗುರುತಿಸಿದ್ದು, ಸದರಿ ಎಂ ಒ ಗಳಿಂದ ತಮಗೂ ಹಾಗೂ ಇತರರಿಗೂ ಹಲ್ಲೆ ಮಾಡಿರುವುದಾಗಿ ನುಡಿಯುತ್ತಾರೆ. ಸಾಕ್ಷಿ ನ್ಯಾಯಾಲಯದಲ್ಲಿ ಹಾಜರಿರುವ 1, 2 ಮತ್ತು 5 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲು ಃ ಆರೋಪಿತರ ಪರ ಃ ಶ್ರೀ ಸಿ ಪಿ ಎಂ ವಕೀಲರಿಂದಃ**</u>

2. ನನ್ನ ಮುಖ್ಯ ವಿಚಾರಣೆಯಲ್ಲಿ ದಿಃ 29.03.2017 ರಂದು ನಾನು ಮನೆಯಲ್ಲಿದ್ದಾಗ ಸುಮಾರು ಸಂಜೆ 4.30 ಗಂಟೆಗೆ 1 ನೇ ಆರೋಪಿಯು ನನ್ನ ತಂದೆಯೊಂದಿಗೆ ಗಲಾಟೆ ಮಾಡಿರುತ್ತಾರೆ, ಚಾಸಾ 2 ಆದ ನನ್ನ ಅತ್ತೆ ನಮ್ಮ ಮನೆಗೆ ಬಂದು 1 ನೇ ಆರೋಪಿಯು ಮತ್ತು ನನ್ನ ತಂದೆ ಗಲಾಟೆ ಮಾಡುತ್ತಿರುವ ವಿಷಯವನ್ನು ನಮಗೆ ತಿಳಿಸಿದರು, ಆಗ ನಾನು ಬ್ರಹ್ಮಪುರದ ಅರಳಿಕಟ್ಟೆ ಹತ್ತಿರ ಹೋಗಿ ನೋಡಿದಾಗ ಗಲಾಟೆಯು ನಿಂತಿದ್ದು, ನಾನು ನನ್ನ ತಂದೆಯನ್ನು ಮನೆಗೆ ಕರೆದುಕೊಂಡು ಬಂದೆ ಎಂದು ಹೇಳಿದ್ದು, ಇದೇ ಹೇಳಿಕೆಯನ್ನು ನಾನು ಪೊಲೀಸರಿಗೆ ಹೇಳಿರುತ್ತೇನೆ. ಆರೋಪಿರು ನನ್ನ ಮನೆಯ ಬಳಿ ನನಗೂ ಹಾಗೂ ಚಾಸಾ 1 ರಿಂದ 4 ಮತ್ತು 6 ರವರಿಗೆ ರಿಪೀಸ್ ಪಟ್ಟಿ ಮತ್ತು ದೊಣ್ಣೆಯಿಂದ ಹಲ್ಲೆ

ಮಾಡಿರುವುದಿಲ್ಲ ಹಾಗೂ ನನ್ನ ತಲೆಗೆ ಯಾವುದೇ ರಕ್ತ ಗಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ.

3. 1 ನೇ ಆರೋಪಿಯು ಚಾಸಾ 4 ಆದ ನನ್ನ ಅಜ್ಜಿಗೆ ಕೆಳಗೆ ನೂಕಿ ಅವರ ಎದೆಯ ಮೇಲೆ ಕಾಲು ಇಟ್ಟು ತುಳಿದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂರದೆ ಸರಿಯಲ್ಲ. ಅದೇ ರೀತಿ ನನ್ನ ತಾಯಿಯಾದ ಚಾಸಾ 6 ರವರಿಗೆ 1 ನೇ ಆರೋಪಿಯು ರಿಪೀಸ್ ಪಟ್ಟಿಯಿಂದ ತೊಡೆಗೆ ಹೊಡೆದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 3 ರವರನ್ನು 3 ಮತ್ತು 4 ನೇ ಆರೋಪಿಯು ಕೆಳಗೆ ಬೀಳಿಸಿ ಕುತ್ತಿಗೆಯನ್ನು ಅದುಮಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನನ್ನು ನನ್ನ ಸ್ನೇಹಿತರಾದ ಕಾರ್ತಿಕ್ ಮತ್ತು ಮನೋಜ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ನನ್ನನ್ನು ಕಾರ್ತಿಕ್ ಮತ್ತು ಮನೋಜ್ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ಪೊಲೀಸರಿಗೆ ಹೇಳಿಕೆ ನೀಡುವಾಗ ಹೇಳಿರುತ್ತೇನೆ. ನನ್ನ ಹೇಳಿಕೆಯನ್ನು ಪೊಲೀಸರು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ನನಗೆ ಪ್ರಥಮ ಚಿಕಿತ್ಸೆಯನ್ನು ಶ್ರೀರಂಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ನೀಡಿದ್ದು, ಹೆಚ್ಚಿನ ಚಿಕಿತ್ಸೆಯನ್ನು ಪ್ರಜ್ವಲ್ ಆಸ್ಪತ್ರೆಯಲ್ಲಿ ನೀಡಿರುತ್ತಾರೆ.

5. ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆ ಯಲ್ಲಿ ನನಗೆ ಪ್ರಥಮ ಚಿಕಿತ್ಸೆ ನೀಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದಾಗ ನನಗೆ ಯಾವುದೇ ರೀತಿ ಪೆಟ್ಟಾಗದ ಕಾರಣ ನನಗೆ ಯಾವುದೇ ಚಿಕಿತ್ಸೆ ನೀಡಿದೇ ಮನೆಗೆ ವಾಪಸ್ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿ ರಕ್ತ ಗಾಯವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರಜ್ವಲ್ ಆಸ್ಪತ್ರೆಯ ವೈದ್ಯರೊಂದಿಗೆ ಶಾಮೀಲಾಗಿ ಚಿಕಿತ್ಸೆ ಪಡೆದಿರುವುದಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೇನೆ ಎಂದರೆ

ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಎಂ ಓ 1 ರಿಂದ 3 ನಾವು ಕೇಸಿಗೆ ಅನುಕೂಲವಾಗಲಿ ಎಂದು ಸೃಷ್ಟಿಸಿ ಪೊಲೀಸರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

6. ದಿಃ 29.03.2017 ರಂದು ಸಂಜೆ 5.30 ಗಂಟೆಗೆ ನಾನು ಮತ್ತು ಚಾಸಾ 1 ಆದ ನನ್ನ ತಂದೆ 1 ನೇ ಆರೋಪಿಯ ಬಳಿ ಹೋಗಿ ಸಾಲದ ಹಣ ಹಿಂದಿರುಗಿಸುವಂತೆ ಕೇಳಿ ಜಗಳ ಮಾಡಿದೆವು ಎಂದರೆ ಸರಿಯಲ್ಲ. ಆಗ ನಾನು ಮತ್ತು ನನ್ನ ತಂದೆ 1 ನೇ ಆರೋಪಿಗೆ ದೊಣ್ಣೆಯಲ್ಲಿ ತಲೆಗೆ ಹಲ್ಲೆ ಮಾಡಿ ಅವರಿಗೆ ರಕ್ತ ಗಾಯಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿಯು ನನ್ನ ಹಾಗೂ ನನ್ನ ತಂದೆಯ ವಿರುದ್ದ ಕೇಸು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಬಿಡಿಸಲು ಹೋದಾಗ 1 ನೇ ಆರೋಪಿಯು ನಮ್ಮ ಮೇಲೆ ಹಲ್ಲೆ ಮಾಡಿ ಸುಳ್ಳು ದೂರು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ 1 ನೇ ಆರೋಪಿಯು ಶ್ರೀರಂಗಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. 1 ನೇ ಆರೋಪಿಯು ನಮ್ಮ ವಿರುದ್ದ ದೂರು ಸಲ್ಲಿಸುವಷ್ಟರಲ್ಲಿ ನಾವು ಆರೋಪಿತರ ವಿರುದ್ದ ಸುಳ್ಳು ದೂರು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿರುವುದಿಲ್ಲ, ಯಾವುದೇ ರಕ್ತ ಗಾಯಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವೇ 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಶ್ರೀರಂಗಪಟ್ಟಣ.